
# ವೇದ ಪುರಾಣಗಳಲ್ಲಿ

# ವಿಮಾನಶಾಸ್ತ್ರ




ಸಂಗ್ರಹ, ಶೋಧನೆ, ವಿವರಣೆ, ಅನುವಾದ

**ಪ್ರೊ॥ ಪಂ॥ ಬದರೀನಾಥಾಚಾರ್ಯ ಘೂಳೀ**



ಮಾಧವ ಮಧ್ವ ಪ್ರಕಾಶನ

೧೬೪, ೭ನೇ ಅಡ್ಡರಸ್ತೆ, ೯ನೇ ಮುಖ್ಯರಸ್ತೆ

ಬಿ.ಇ.ಎಂ.ಎಲ್. ಬಡಾವಣೆ, ರಾಜರಾಜೇಶ್ವರೀನಗರ

ಬೆಂಗಳೂರು – ೫೬೦ ೦೯೮

VEDA PURANAGALALLI VIMANASHASTRA (Shodhane, Sangraha, Nirupane and Anuvada) Edited by Prof. Badarinathacharya Ghooli M.A., Retired Professor and Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 098 Phone : 080-28602191

First Edition : Sept. 2009

© Prof. Badarinathachar Ghooli

Typeset (DTP) By
**P. S. RAGHAVENDRA**
Bangalore-560 050
Phone 080-22421294

# ವೇದಪುರಾಣಗಳಲ್ಲಿ ವಿಮಾನಶಾಸ್ತ್ರ

**ಪ್ರಸ್ತಾವನೆ :– Description of Aeroplane (ವಿಮಾನ) in Vedas and Puranas**

ಭಾರತೀಯರಲ್ಲಿ ಸಂಸ್ಕೃತಿ (faculty capacity to appreciate the merit of action – ಪ್ರಾಚೀನ ಭಾರತೀಯರಿಗೆ ಬೆಳವಣಿಗೆಯ ಬಗ್ಗೆ ಅರಿವು) ಇರುವುದಿಲ್ಲ, ಅಸಂಸ್ಕೃತರು. ಭಾರತ ಅನಾಗರೀಕ ದೇಶ, ವಿಜ್ಞಾನವಂತೂ ಅವರಲ್ಲಿ ಇರುವುದಿಲ್ಲ, ಗೊಡ್ಡು ಸಂಪ್ರದಾಯದವರು, ಅಂಧ ವಿಶ್ವಾಸಿಗಳು ಎಂದು ಟೀಕಿಸಿ ಪಾಶ್ಚಿಮಾತ್ಯ ದೇಶಗಳಲ್ಲಿ ಭಾರತದ ಬಗ್ಗೆ ಆದರವಿಲ್ಲ. ಈಗಲೂ ಇರುವುದಿಲ್ಲವೆಂದು ನಿಂದಿಸಿರುತ್ತಾರೆ. ಆದರೆ ಪಾಶ್ಚಿಮಾತ್ಯರ ಟೀಕೆ ನಮ್ಮ ರಾಷ್ಟ್ರ ಚರಿತ್ರೆ ಪ್ರಗತಿ ಹೊಂದಿದ್ದರೂ ಅವನ್ನು ವಿರೂಪಗೊಳಿಸಿ ಕೊಂಕು ಮಾತುಗಳಿಂದ ವಿಮರ್ಶೆ ಮಾಡಿರುವುದು ವಿಷಾದದ ಸಂಗತಿ. Inventors ಶೋಧಿಸುವವರು ಯಂತ್ರಶೋಧಕತ್ವ ಜಾಣತನ, ಹೊಸತನವನ್ನು ಹೊರ ತೆಗೆದು ಪ್ರಕಟಿಸುವ ಮನೋವೃತ್ತಿ ಇರುವುದಿಲ್ಲವೆಂದು ಆಪಾದನೆ ಇರುವುದು ಎಂದು ಬರೆದಿರುವಾಗ ಆ ಅಪವಾದ ನಿರಾಧಾರವೆಂದು ತಿಳಿಸುವುದು ಈ ಕೃತಿಯ ಉದ್ದೇಶವಾಗಿದೆ.

ಪ್ರಸ್ತುತ ನಮ್ಮ ದೇಶದಲ್ಲಿ ಯೂರೋಪಿಯನ್‌ರಂತಹ ಸಂಶೋಧಕ ವಿಜ್ಞಾನಿಗಳು ಈಗ ಇರದಿರಬಹುದು. ಹಾಗೆಂದ ಮಾತ್ರಕ್ಕೆ ಕ್ರಿಸ್ತ ಪೂರ್ವ ನಮ್ಮ ದೇಶದಲ್ಲಿ ಸಾಕಷ್ಟು ವಿಜ್ಞಾನ ಸಂಶೋಧಕರು ಇದ್ದರೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಎಷ್ಟೋ ಯುಗಗಳಲ್ಲಿ ಪ್ರಸ್ತುತ ವಿಮಾನಶಾಸ್ತ್ರದ ಬಗ್ಗೆ ವೇದ ಪುರಾಣಗಳಲ್ಲಿ ಉಲ್ಲೇಖವಿರುವುದೆಂದು ತೋರಿಸಲು ಈ ಲೇಖನ ಪ್ರವೃತ್ತವಾಗಿದೆ. ವಿಮಾನವೆಂದರೆ Aeroplane ಅಂದರೆ Flying Machine = Heavenly car that travels like a bird, using air as a pressure to fly above the earth ಎಂದಿರುವುದು. ಇಲ್ಲಿ ವಾಯುವಿನ ಒತ್ತಡದಿಂದಾಗಿ ಹಾರುವ ಒಂದು ಯಂತ್ರ ಎಂಬ ವಾಕ್ಯವೇ ತಿಳಿಸುವುದು. **ವಾಯು**ವಿನ ಶಕ್ತಿ ಅಗತ್ಯವೆಂದು ತಿಳಿಸುವುದು. ಇದನ್ನೇ ವಿಮಾನವೆನ್ನಲಾಗಿದೆ. ವಿ + ಮಾನ (ಯಾನ).

ವಿಮಾನದ ಪರಿಕಲ್ಪನೆ ಭಾರತದಲ್ಲಿ ಅತಿ ಪುರಾತನವಾಗಿ ಬಳಸಲಾಗಿ, ವಾಯುಮಾರ್ಗದಿಂದ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಭೂಮಿಯ ಸಹಾಯವಿಲ್ಲದೆ ಹಾರಿ ಹೋಗಿ ಸೇರುವುದು ಎಂದಿದೆ.

ಪ್ರಶ್ನೆ ಈಗ ವಿಮಾನದ ಬಗ್ಗೆ ನಾವೇಕೆ ತಿಳಿಯಬೇಕು ? ನಮಗೇನು ಪ್ರಯೋಜನವೆಂದರೆ ಇದರ ಜ್ಞಾನದಿಂದಾಗಿ ಹಲವಾರು ಪ್ರಯೋಜನಗಳಿರುವುದು.

**''ಯೋಗಕ್ಷೇಮಮ್ ವಿರಹಃ ಸನ್ ನ ಮರಣಂ ಕಾದಾಚಿತ್ ಪ್ರಾಪ್ತಃ**
**ಜನಪುರುಷಾರ್ಥೇ ಅನಿಲ ಇವ ಅತ್ಯರ್ಥೆ ವಿಹಾಸನ್ ॥**
**ತಥಾ ತಾಭ್ಯಾಮುಕ್ತ ಪ್ರಯತ್ನಾಭ್ಯಾಂ ಭೂಯಾಂ**
**ಸ್ಥಾನಾನ್ಯಪಿ ವಿಮಾನಾದಿನಿ ಸಾಧನಾನಿ''** (ಮತ್ಸ್ಯಪುರಾಣ)

**ಅರ್ಥ :–** ಇಂತಹ ಪದಾರ್ಥಗಳನ್ನು ಹೊಂದಿದವನಿಗೆ ವಿಮಾನವು ರಕ್ಷಿಸುವುದು. ಇನ್ನು ಸಾಮಾಜಿಕ ಪ್ರಯತ್ನವೆಂದರೆ ಅಗ್ನಿ, ವಾಯು, ಪೃಥ್ವಿ, ಆದಿಯಾದ ಪದಾರ್ಥಗಳಿರುವಾಗ ರಾಷ್ಟ್ರವು ಬೇಗನೆ ಗಮನಾಗಮ ಶಕ್ತಿ ಕೂಡಿರುತ್ತದೆ. ದೇಶಾಂತರಗಳಿಗೆ ಹೋಗಲು ಸುಖಮಯವಾಗುವುದು. ಇದರಿಂದ ರಾಷ್ಟ್ರದ ಉನ್ನತಿಯನ್ನು ಸಾಧಿಸಬಹುದು.

ಪುರಾಣಗಳಲ್ಲಿ ವಿಮಾನ ಎಂದರೇನು ? ತಿಳಿಯೋಣ.

**ಏನಂ ಅಂತರಿಕ್ಷಂ ಪ್ರತಿಗಂತುಂರ್ಭಿರ್ವಿಮಾನಾಖ್ಯೇನೈಃ ।**
**ಸುರ್ವೈರ್ಮನುಷ್ಯೈಃ ಪರಮೈಶ್ವರ್ಯಂಸ ಸಮ್ಯಕ್ ಪ್ರಾಪಣೀಯಂ ॥**

ಆಕಾಶದಲ್ಲಿ ಚಲಿಸುವ ಯಾನವು ವಿಮಾನ ಎಂದು ಪ್ರಸಿದ್ಧಿ ಹೊಂದಿದೆ. ಇಂತಹ ವಿಮಾನವು ಮಾನವರಿಗೆಲ್ಲಾ ಉತ್ತಮ ಸಂಪತ್ತನ್ನು ಸಂಪಾದಿಸಲು ಸಹಕಾರಿಯಾಗುವುದು.

ವಿಮಾನ ನಿರ್ಮಾಣದ ಬಗ್ಗೆ ಅದರ ವಿಷಯವಾಗಿ ಪರಾಶರ ಸ್ಮೃತಿಯಲ್ಲಿ **ಜಾರ್ಣವ**ನೆಂಬ ಆಚಾರ್ಯ ವಿವರಿಸುತ್ತಾನೆ.

**''ಭರ್ಜರೀ ಭರ್ತರಾವಿನ್ಯರ್ಥಃ ತುದುರ್ಪರೀತು ಹಂತಾರೌ ।**
**ಉದನ್ಯಾ ಚೇವೇತ್ಯುದಕಜೆ ಇವ ರತ್ನೆಸಮುದ್ರೇ ಚಾಂದ್ರಯಸೆ ॥''**

ಇಲ್ಲಿ ಭರ್ಜರೀ ಎಂದರೆ ವಿಮಾನ. ಇಂತಹ ವಿಮಾನವನ್ನು ಪಡೆಯಬೇಕೆಂಬುವವನು ದುರ್ಪರೀತ್ = ಕೆಲ ಮಂತ್ರಗಳಿಂದ ತಾಡಿಸಿದ = ವಾಯು, ಅಗ್ನಿ, ಜಲ, ಪೃಥ್ವಿ ಪದಾರ್ಥಗಳನ್ನು ಉಪಯೋಗಿಸಿ ಸಂಯುಕ್ತವಾಗಿ ಮಾಡಿದಾಗ ವಿಮಾನವೆಂಬ ಧಾರಣ ರಕ್ಷಣೆಯಾಗುವುದು. ಅದರಿಂದ ಹಾರುವುದೂ ವೇಗವೂ ಉದ್ಭವಿಸುವುದು.



ಈ ರೀತಿಯ ವಿಮಾನದಲ್ಲಿ ಪ್ರಯಾಣಿಸುವಾಗ ವಾಯು ಇತ್ಯಾದಿಗಳಿಂದ ಒದಗಬಹುದಾದ ವಿಘ್ನಗಳಿಂದ ಕಾಪಾಡಿಕೊಳ್ಳಲು ಲೋಹ (ಕಬ್ಬಿಣ) ಲಂಗರುಗಳನ್ನಿಟ್ಟುಕೊಳ್ಳಬೇಕು. ಹೀಗೆ ಮಾಡಿದಾಗ ಎಲ್ಲಿಗೆ ಬೇಕಾದರೂ, ಯಾವಾಗ ಬೇಕಾದರೂ ಚಲಿಸಲೂಬಹುದು ಹಾಗೂ ನಿಲ್ಲಿಸಲೂಬಹುದು. ಇಂತಹ ಯಾನವು ನೂರು ಯಂತ್ರಗಳಿಂದ ಕೂಡಿದಾಗ ಅದಕ್ಕೆ ಲಂಗರೂ ಇರಬೇಕು. ಅದು ಸಾಧನವಾಗಬಹುದೆಂದು ತಿಳಿಸುತ್ತಾ ನಿರ್ವಹಿಸಬೇಕು ಎಂಬ ವಿವರಣೆ ಕಾಣುತ್ತೇವೆ.

ಶಿಲ್ಪಿಗಳು – Aero Engineers ನಿರ್ಮಾಣ ಮಾಡಿ ತುರ್ತುಗಮನವಾಗಿಯೂ ಹಾರುತ್ತಾ, ತನಗೆ ಎಲ್ಲಿ ಬೇಕಾದರೂ ಇಳಿಯುವಂತೆ ಯಂತ್ರ ಸಾಧನಗಳನ್ನು ಅಳವಡಿಸಿಕೊಳ್ಳುವಂತಿರಬೇಕು. ಇದನ್ನೇ ಈಗ helicopterನ ಪರಿಕಲ್ಪನೆ. ಆದ್ದರಿಂದ ಯಾನ ನಿರ್ಮಾಣಮಾಡಬೇಕಾದರೆ ಪದಾರ್ಥಗಳ (usage of materials) ಜೋಡಣೆಯ ಬಗ್ಗೆ ಚೆನ್ನಾಗಿ ತಾಂತ್ರಿಕತೆಯನ್ನು ತಿಳಿದಿರಬೇಕು.

ವಿಮಾನಗಳ ಪರಿಕಲ್ಪನೆ ವೇದ ಪುರಾಣಗಳಲ್ಲಿ ಸಾಕಷ್ಟು ವಿವರಣೆ ಕಾಣುತ್ತೇವೆ. ಮತ್ಸ್ಯಪುರಾಣ, ವಾಯುಪುರಾಣಗಳಲ್ಲಿ ಸ್ವಲ್ಪ ವಿವರ ಇರುವುದೆಂದು ಒಬ್ಬ ಜರ್ಮನ್ ವಿಜ್ಞಾನಿ Stuggert Well ಎಂಬುವವನು ಹಿಂದೆ ೧೯೬೯ರಲ್ಲಿ ಒಂದು ಲೇಖನದಲ್ಲಿ ತಿಳಿಸಿದ್ದಾನೆ.

The unknown technical skills in India ಎಂಬ ಕೃತಿಯಲ್ಲಿ ಬರೆದಿರುತ್ತಾನೆ. The concept of aeroplane of our times was well conceived by saints of ancient India, but how and when such knowledge disappeared remains a mystery ಎಂದಿದ್ದಾನೆ. ಇನ್ನೊಬ್ಬ ಜರ್ಮನ್ ವಿಜ್ಞಾನಿ Mathew Detratt ಎಂಬಾತ ತನಗೆ ಭಾರತೀಯರ ವಿಜ್ಞಾನದ ಬಗ್ಗೆ ಎಷ್ಟು ದೀರ್ಘವಾದ ವಿದ್ವತ್ ಇದ್ದಿತು ಎಂದರೆ, ಭಾರತೀಯರ ತತ್ವಜ್ಞಾನವೆಷ್ಟಿದ್ದಿತೋ ಅಷ್ಟೇ ವಿಜ್ಞಾನದ ಅರಿವೂ ಇದ್ದಿತು ಎಂದು. ಇಂಥಾ ವಿಜ್ಞಾನ ಕುರಿತ ಕೃತಿಗಳು ಕೆಲವು ಮಾತ್ರ ಜರ್ಮನಿಯಲ್ಲಿ ಲಭ್ಯವಿದೆ ಎಂದಿದ್ದಾನೆ.

ಅಲ್ಲದೆ ಆಶ್ಚರ್ಯದ ಸಂಗತಿ ಎಂದರೆ during the Second World War, German dictator Hitler had acquired the secret formulae of making aeroplane from Indian Books of Science. As a result, his aids built aeroplanes used to crush the West ಎಂದಿದ್ದಾನೆ. ಇಂತಹ ಭಾರತೀಯರ ಶ್ರೇಷ್ಠ ಕೃತಿಗಳು ಜರ್ಮನಿಗೆ ಹೇಗೆ ಹೋದವು ? ಎನ್ನುವುದು ನಿಗೂಢ ಪ್ರಶ್ನೆಯಾಗಿದೆ.

ವಿಮಾನ ವೇಗದ ಬಗ್ಗೆ ೧-೬-೯-೮ರಲ್ಲಿ ತಿಳಿಸುತ್ತಾ ಮನಸ್ಸಿನಂತೆ ಅತಿ ವೇಗವಾಗಿ ಚಲಿಸುವಂತೆ ಹಾಗೂ ವಾಯು ಅಗ್ನಿಗಳೆಂಬ ಪದಾರ್ಥಗಳ ಸಹಾಯವಾಗುವುದು ಎಂದಿದೆ. ಇಲ್ಲಿ ವಿಮಾನದ ವೇಗವನ್ನು ಮನಸ್ಸಿನ ವೇಗಕ್ಕೆ ಹೋಲಿಸುವುದು ಗಮನಾರ್ಹ.

**ವೀರ್ಯೇಭ್ರಾಜಂತೆ ಸುಮಸ್ವಾಸ ಋಷ್ಟಿತ್ರಿಕ**
**ಪ್ರಾಚ್ಯಾವಯಂತೊ ಅಭ್ಯುತಾ ಚಿವೊಜಸಾ**
**ಮನೋಜವೋ ಯನ್ಮರುಭ್ಯೋ ರಥೇಶ್ಯ**
**ರುಷಪ್ರಾತಾಸಃ ಋಷಿಭಿರಯುರ್ಥ್ವಮಾ ॥**

**ಅರ್ಥ :** ಮನುಷ್ಯನೇ, ಒಂದು ಯಾನವನ್ನು ತಯಾರು ಮಾಡು. ಇದು ಯಾವ ಕುದುರೆಗಳಿಲ್ಲದೆ, ಹಾರುವ ರಥದಂತಿರಬೇಕು. ಗಾಳಿ (ವಾಯುವೇಗ)ದಂತೆ ಶೀಘ್ರ ಚಲಿಸುವಂತೆ ಯಂತ್ರಗಳಿಂದ ನಿರ್ಮಿತವಾಗಿರಬೇಕು. ಇಂತಹ ಯಂತ್ರ (ಯಾನ)ವನ್ನು ತಯಾರು ಮಾಡು.

ಶಿಲ್ಪಿ ಅತಿ ಕುಶಲನಾಗಿರಬೇಕು. ಇದಕ್ಕೆ ವಾಯುವೇಗ (ಗಾಳಿ) ಅಗ್ನಿ (ಬೆಂಕಿ) ಸಂಯೋಗವಿರಬೇಕು. ಇಂತಹ ವಿಮಾನವನ್ನು ನಿರ್ಮಿಸಿದ ಮೇಲೆ ಅದನ್ನು ಉಪಯೋಗಿಸುವ ಸಾಮರ್ಥ್ಯವಿರಬೇಕು.

ವಿಮನದಲ್ಲಿ ಯಂತ್ರಗಳು ಅರೆಗಳನ್ನು ಹಿಡಿಯುವುದಕ್ಕಾಗಿ ಹನ್ನೆರಡು ಕಂಭಗಳನ್ನು ಅಳವಡಿಸಿರಬೇಕು. ವಿಮಾನಕ್ಕೆ ಚಕ್ರವಿರಬೇಕು. ಆ ಚಕ್ರವನ್ನು ತಿರುಗಿಸಿದಾಗ ಬಾಕಿ ಎಲ್ಲಾ ಯಂತ್ರಗಳು ತಿರುಗಬೇಕು. ಮೂರು ಚಕ್ರಗಳು ತಿರುಗುತ್ತಿರುವಾಗ ಒಂದನ್ನು ಮಾತ್ರ ತಿರುಗಿಸಿದಾಗ ಬಾಕಿ ಎರಡು ಚಕ್ರಗಳು ತಮಷ್ಟಕ್ಕೆ ತಾವೇ ಮಡಿಚಿಕೊಳ್ಳಬೇಕು.

ಹಾಗೇ ವಿಮಾನ ಕೆಳಗೆ ಇಳಿಯಬೇಕಾದರೆ ಭೂ ಸ್ಪರ್ಷವಾದಾಗ ಒಂದು ಚಕ್ರದಿಂದ ಇನ್ನೆರಡು ಚಕ್ರಗಳು ಬಿಚ್ಚಿಕೊಂಡು ಸಾವಧಾನವಾಗಿ ಇಳಿಯಬೇಕು. ಹೀಗೆ ಯಂತ್ರವು ಮುನ್ನೂರು ವಿವಿಧ ಗಾತ್ರದ ಚಕ್ರಗಳು ಪರಸ್ಪರ ಹೊಂದಾಣಿಕೆಯಿಂದ ತಿರುಗುತ್ತಿರಬೇಕು. ಈ ಚಕ್ರಗಳು ಚಲಿಸುವುದಕ್ಕೂ, ನಿಲ್ಲಿಸುವುದಕ್ಕೂ ಯೋಗ್ಯವಾಗಿರಬೇಕು. ವಿಮಾನ ತನ್ನಷ್ಟಕ್ಕೆ ತಾನೇ ಚಲಿಸುವುದಿಲ್ಲ. ಜಡಪದಾರ್ಥವಾದ್ದರಿಂದ ಒಬ್ಬ ಜಾಣ ಚಾಲಕ (Pilot)ನ ಅಗತ್ಯವಿದೆ. ವಿಮಾನವನ್ನು ಮೇಲಕ್ಕೇರಿಸುವಾಗ ಬಾಹ್ಯ ಕೋಣೆಯು ಅಂದರೆ ಮೇಲಿನ ದ್ವಾರವು ಮುಚ್ಚಿರಬೇಕು.



ಹಾಗೇ ಕೆಳಗಿಳಿಯುವಾಗ ಆ ದ್ವಾರವು ಅಂದಾಜಿನಂತೆ ತೆರೆಯಬೇಕು. ಹೀಗೆ ಪೂರ್ವ, ಉತ್ತರ, ದಕ್ಷಿಣ ದ್ವಾರಗಳಲ್ಲಿ ಅಳವಡಿಸಿರಬೇಕು.

ಇಂತಹ ವಿಮಾನವು ಹೆಚ್ಚಾಗಿ ವ್ಯಾಪಾರಕ್ಕಾಗಿ ವೈಶ್ಯರಿಗೆ (Commercial purpose) ಪ್ರಯೋಜನವಾಗುವುದು.

**ತಮಶ್ಯ್ಕರ್ಥೋ ವೈಶ್ಯೇ ವಣಿಗಜನೋ ವಶ್ಯಂ ಗೃಹೀಯತಮ್ ।**

ವೈಶ್ಯ ಜನರು ಅಂದರೆ ವ್ಯಾಪಾರ ಮಾಡುವವರು ಇಂತಹ ವಿಮಾನವನ್ನು ಹೊಂದಿರಬೇಕೆಂದಿದೆ. ವಿಮಾನವಿದ್ದರೆ ದ್ವೀಪಾಂತರಗಳಿಗೆ ತೆರಳಿ ತಮ್ಮ ಸರಕುಗಳನ್ನು ವಿಕ್ರಯಿಸಲು ಸಹಾಯವಾಗುವುದು. ಹಾಗಲ್ಲದಿದ್ದರೆ ದೇಶದ ಉನ್ನತಿಗೆ ಬಿಕ್ಕಟ್ಟು ಬರಬಹುದು. ವಿಮಾನವು ವೇದ ಕಾಲಗಳಿಂದಲೂ ವ್ಯಾಪಾರ ವಾಣಿಜ್ಯಕ್ಕಾಗಿ ಹೆಚ್ಚಾಗಿ ಬಳಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಇಂತಹ ವಿಮಾನವು ನಿರ್ಮಿಸುವಲ್ಲಿ ವೇದವೇದ್ಯರಿಂದ ಕೇಳಿ ತಿಳಿದು ಚತುರನು ಹಸ್ತಕೌಶಲ್ಯವಿದ್ದವನು ಸಾಧಿಸಬಲ್ಲನು. ಇದರಿಂದ ತಮಗೂ, ರಾಷ್ಟ್ರಕ್ಕೂ ಭೋಗ ಸಂಪತ್ತು ಹೊಂದುವಂತೆ ಮಾಡಬಹುದು. ಅಂತಹ ಕಲಾಕೌಶಲ್ಯವುಳ್ಳವರು ವಾಯು ಅಗ್ನಿಯಾದಿ ಆ ಪದಾರ್ಥಗಳ ಯಂತ್ರಗಳ ಮೂಲಕ ಮನೋವೇಗಕ್ಕಿಂತ ದೀರ್ಘವಾಗಿ ಪಯಣಿಸಲೂ ಹೆಚ್ಚು ಸಹಕಾರಿಯಾಗುವುದು ಎಂದು ವೇದಗಳಲ್ಲಿ ತಿಳಿಸಲಾಗಿದೆ.

**ಪೃಥ್ವಿ ನಿಯಮಃ ಕಾಷ್ಟಲೋಷ್ಠಾದಿಭಿಃ ಪದಾರ್ಥೈಃ ಯಾನಯ ರಾಚಯಿತ್ವ ಅಗ್ನಿಜಲಾದಿ ಪ್ರಯೋಗೇಣಕೈತೈನರ್ದುಭಾದಿಭಿಃ ॥**

ಆದರೆ ವಿಮಾನವನ್ನು ದುಷ್ಟ ಕಾರ್ಯಕಾಮನೆಗಾಗಿ ಮನುಷ್ಯ ಸ್ವಾರ್ಥ ಸಾಧನೆಗಾಗಿ ಪರರಾಜ್ಯ ನಾಶ, ಅಪಹರಣ ಇತ್ಯಾದಿ ದುಷ್ಟ ಕ್ರಿಯೆಗಳಿಗೆ ಬಳಸಬಾರದು ಮತ್ತು ಸಂಗ್ರಹಿಸಬಾರದೆಂದು ಎಚ್ಚರ ಕೊಡುತ್ತದೆ.

**ದ್ವಾದಶ ಪ್ರಧಾನ ಚಕ್ರಮೇಶಂ ತ್ರಿಣಿ ನವ್ಯಾನಿಕೌತಾಚಿ ।**
**ತಸ್ಮಿಂತಸಾಕಂ ತ್ರಿಶತಾನಿನ ಅಂತವ್ರೋರ್ಪಿತಃ ಷಷ್ಟಿನ್ ಚಕ್ರೆ ।**

ಇಂತಹ ದುಷ್ಟ ಶಕ್ತಿ ರಾಜ್ಯಗಳು ಹಿಂದಿನಿಂದಲೂ ಇದ್ದವು. During the Second World War, atom bomb was applied on Japan (Heroshima) which is a living reality. Hitler, Mussolene, Saddam ಆದಿಯಾಗಿ ರಾಕ್ಷಸೀಯ ಮನೋಭಾವದವರನ್ನು ಈ ಶತಮಾನದಲ್ಲಿ ಕಾಣುತ್ತೇವೆ. ಪರರಾಜ್ಯ, ಜನ

ನಾಶವಾಗಲೆಂದು ದುಷ್ಟ ಶಕ್ತಿಗಳು ಈ ಮಾರಕ ಉಪಕರಣಗಳನ್ನು ಸಂಗ್ರಹಿಸಿದ್ದರು.

ವಿಮಾನದ ಬಗ್ಗೆ ಶೃತಿಗಳಲ್ಲಿರುವುದನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಇನ್ನು ಸ್ಮೃತಿಗಳಲ್ಲಿಯೂ ವಿವರ ತಕ್ಕಮಟ್ಟಿಗೆ ಕಾಣಬಹುದು. ಭಾರದ್ವಾಜ ಸಂಹಿತೆಯಲ್ಲಿ ವಿಮಾನ ನಿರ್ಮಾಣ ಉಪಯೋಗದ ಬಗ್ಗೆ ತಕ್ಕಮಟ್ಟಿಗೆ ಮಾಹಿತಿ ಇರುವುದಾದರೂ ಪೂರ್ಣ ವಿವರ ಇರುವುದಿಲ್ಲ. ಇದು ನಮ್ಮ ದುರ್ದೈವ. ಆ ಉತ್ತಮ ಗ್ರಂಥ ನಮ್ಮ ದೇಶದಲ್ಲಿ ಈಗ ಇಲ್ಲ. ಈ ಹಿಂದೆ ತಿಳಿಸಿದಂತೆ ಜರ್ಮನಿಯಲ್ಲಿ ಲಭ್ಯವಿರುವುದಾಗಿ ತಿಳಿದುಬರುತ್ತದೆ. ಆದರೆ ನಮ್ಮ ದುರ್ದೈವವೆಂದರೆ ಅಂತಹ ಉತ್ತಮ ವೈಜ್ಞಾನಿಕ ಗ್ರಂಥಗಳ ಬಗ್ಗೆ ಈ ದೇಶದಲ್ಲಿ ಸಂಪೂರ್ಣ ಮಾಹಿತಿ ಲಭ್ಯವಿಲ್ಲದಿರುವುದು. ಆದರೆ ನಮ್ಮ ದೇಶದ ಅಲ್ಲಲ್ಲಿ ಮಾತ್ರ ಕೆಲವು ಅಂಶಗಳನ್ನು ಕಾಣಬಹುದು.

## ವಾಲ್ಮೀಕಿ ರಾಮಾಯಣ ಹಾಗೂ ಭಾಗವತಗಳಲ್ಲಿ ವಿಮಾನ ವರ್ಣನೆ

**ವಾಲ್ಮೀಕಿ ರಾಮಾಯಣ ಸುಂದರಕಾಂಡ**ದಲ್ಲಿ ಸ್ವಲ್ಪ ವಿವರವಾಗಿ ತಿಳಿಸಲಾಗಿದೆ ಹಾಗೂ ಶ್ರೀಮದ್ಭಾಗವತ ೬ನೇ ಸ್ಕಂದ ೭ನೇ ಅಧ್ಯಾಯ ೩೮–೪೯ರ ಶ್ಲೋಕಗಳಲ್ಲಿ, ಅದೇ ೩ನೇ ಸ್ಕಂದ ೩೪ನೇ ಅಧ್ಯಾಯದಲ್ಲಿ ಕರ್ದಮರು, ದೇವಹೂತಿಯೊಂದಿಗೆ ತಮ್ಮ ಯೋಗಬಲದಿಂದ ದಿವ್ಯ ವಿಮಾನವನ್ನು ನಿರ್ಮಿಸಿ ಸರ್ವತ್ರ ಸಂಚರಿಸಿದರೆಂದು ವಿಮಾನದ ಬಗ್ಗೆ ತಿಳಿಸಲಾಗಿದೆ. ಹಾಗೇ ಭಾಗವತ ೬ನೇ ಸ್ಕಂದ ೭ನೇ ಅಧ್ಯಾಯ ೩೪–೪೯ರಲ್ಲಿ ಚಿತ್ರಕೇತುವಿನ ವಿಮಾನದ ಬಗ್ಗೆ ಹೇಳಲಾಗಿದೆ. ಪ್ರಸ್ತುತ ವಾಲ್ಮೀಕಿ ರಾಮಾಯಣ ಸುಂದರಕಾಂಡ ೭ನೇ ಅಧ್ಯಾಯದಲ್ಲಿ ೧೬ ಶ್ಲೋಕಗಳಿಂದ ರಾವಣನ ವಿಮಾನ ವರ್ಣನೆ ಸವಿಸ್ತಾರವಾಗಿ ವರ್ಣಿತವಾಗಿರುವುದು.

ರಾವಣ ಸೀತಾದೇವಿಯನ್ನು ಚಿತ್ರಕೂಟ ಗೋದಾವರೀ ತೀರದ ಪರ್ಣ ಕುಠೀರದಲ್ಲಿ ಏಕಾಂಗಿಯಾಗಿ ಇರುವುದನ್ನು ಕಂಡು, ಸನ್ಯಾಸಿ ವೇಷದಿಂದ ಬಂದು ಭಿಕ್ಷೆ ಕೊಡಲು ಬಂದ ಸೀತೆಯನ್ನು ನೋಡಿ ಮೋಹಿತನಾಗಿ ತನ್ನ ನಿಜ ರೂಪವನ್ನು ತೋರಿಸಿ ವೈದೇಹಿಯನ್ನು ಕೇಳುತ್ತಾನೆ. ತಾನು ಸೀತೆಯಲ್ಲಿ ವಿಧವಿಧವಾಗಿ ರಾಮನನ್ನು ಹೀಯಾಳಿಸುತ್ತಾ ತನ್ನ ಪತ್ನಿಯಾಗೆಂದು ಎಷ್ಟೋ ಸಲ ಹೇಳುತ್ತಾನೆ. ಸೀತೆಯು ರಾವಣನ ಮಾತುಗಳಿಂದ ಕ್ರುದ್ಧಳಾಗಿ ಅವನನ್ನು ನಿಂದಿಸಿ ನಿರಾಕರಿಸುತ್ತಾಳೆ. ರಾವಣನಿಗೆ ಕೋಪಬಂದು ಆಕೆಯನ್ನು ಬಲಾತ್ಕಾರವಾಗಿ ತನ್ನ ರಥದಲ್ಲಿ



ಕುಳ್ಳರಿಸಿಕೊಂಡು ಹೋಗುತ್ತಾನೆ ಎಂದಿದೆ. ಇಲ್ಲಿ ವೈದೇಹಿಯನ್ನು ಲಂಕಾಪಟ್ಟಣಕ್ಕೆ ಕೊಂಡೊಯ್ಯಲು ರಥದಲ್ಲಿ ಹೋದನೆಂದು ವಾಲ್ಮೀಕಿ ತಿಳಿಸಿದಾಗ ವಿಮಾನ ಪ್ರಸಕ್ತಿ ಇರುವುದಿಲ್ಲ.

**ತತ್ಸ್ತಾಂ ಪರುಷೈರ್ವಾಕ್ಯೈರ್ಭರ್ತರ್ಯನ್ಸಮಹಾಸ್ವನಃ ।**
**ಅಂಕೇನಾದಾಯ ವೈದೇಹೀಂ ರಥಮಾರೋಪ್ಯಯತ್ತದಾ ॥**

(ರಾಮಾಯಣ ಅರಣ್ಯ – ೪೯ – ೧೯)

ಅಂದರೆ ಸೀತಾದೇವಿಯನ್ನು ರಥದಲ್ಲಿ ಕೊಂಡೊಯ್ದನು ಎಂದಿರುವಾಗ ಆ ರಥವು ಮುಂದೆ ಒಂದು ಪರ್ವತ ಶಿಖರದಲ್ಲಿದ್ದ ಜಟಾಯು ನೋಡಿದನೆಂದಿದೆ. ರಥವು ಪರ್ವತ ಶಿಖರದಲ್ಲಿದ್ದ ಗೃಧ್ರರಾಜನೊಂದಿಗೆ ಕಾದಾಡಿ ಅವನ ರೆಕ್ಕೆಗಳನ್ನು ಕತ್ತರಿಸಿದ. ಇಂತಹ ರಥವು ಬೆಟ್ಟ ಹತ್ತಬೇಕಾದರೆ ಅದು ಸಾಧಾರಣ ರಥವಾಗಿರಲಿಕ್ಕಿಲ್ಲ ಅಂದಾಗ ಅದು ವಿಮಾನವೇ ಆಗಿರಬೇಕು.

ಹನುಮಂತ ದೇವರು ರಾವಣನ ಅಂತಃಪುರದಲ್ಲಿ ವಿಮಾನವು ರಥದಂತಿರುವುದನ್ನು ನೋಡಿರಬೇಕು. ಆ ರಥ(ವಿಮಾನ)ವನ್ನು ನೋಡಿ ಹನುಮಂತದೇವ ಆಶ್ಚರ್ಯಭರಿತನಾಗಿರುವುದನ್ನು ವಾಲ್ಮೀಕಿ ವರ್ಣಿಸುತ್ತಾನೆ.

**ರಾವಣನ ವಿಮಾನ ವರ್ಣನೆ :** ಶ್ರೀರಾಮಚಂದ್ರ ಜಾನಕಿಯನ್ನು ಹುಡುಕಲು ಹನುಮಂತನನ್ನು ದಕ್ಷಿಣಕ್ಕೆ ಕಳುಹಿಸುತ್ತಾನೆ. ವಾಯುಪುತ್ರ ದಕ್ಷಿಣ ಸಮುದ್ರ ದಾಟಿ ಲಂಕಾಪಟ್ಟಣ ಸೇರುತ್ತಾನೆ. ಜಾನಕೀ ಅನ್ವೇಷಣೆಗಾಗಿ ನಗರ ಗೃಹಗಳಲ್ಲಿ ಆಕೆಯನ್ನು ಕಾಣದೇ, ರಾವಣನ ಅಂತಃಪುರವನ್ನು ಸೇರುತ್ತಾನೆ. ಇಲ್ಲಿ ಲಂಕಾನಗರಿಯ ವರ್ಣನೆ ಮಾಡಲಾಗಿದೆ. ರಾವಣ ರಾಕ್ಷಸನಾದರೂ ಅವನಲ್ಲಿ ಎಷ್ಟು ಕಾಲಪ್ರಜ್ಞೆ, ಸೌಂದರ್ಯಪ್ರಜ್ಞೆ ಇದ್ದುದನ್ನು ವರ್ಣಿಸಲಾಗಿದೆ. Ravana had a particular taste for things beautiful and his appreciation of good besides beautiful ladies, his sense of aestheticism was commendable. ರಾವಣನ ಅನೈತಿಕ ವರ್ತನೆಯೇ ಬೇರೆ, ಸೌಂದರ್ಯೋಪಾಸನೆಯೇ ಬೇರೆ ಆಗಿದ್ದಿತೆಂದು ತಿಳಿಸಲಾಗಿದೆ.

ಲಂಕಾಪಟ್ಟಣದಲ್ಲಿನ ರಾವಣನ ಅರಮನೆ ಅಮರಾವತಿಗೆ ಹೋಲಿಸುವಂತಿತ್ತು ಮತ್ತು ಅಷ್ಟೇ ಸುಂದರವಾಗಿತ್ತೆಂದು ವರ್ಣಿತವಾಗಿದೆ.

**ನಿವೇಶನಾನಾಂ ವಿವಿಧಾಶ್ಚ ಶಾಲಾಃ ಪ್ರಧಾನಶಂಖಾಯುಧಚಾಪಶಾಲಾಃ ।**
**ಮನೋಹರಾಶ್ಚಾಪಿ ಪುನರ್ವಿಶಾಲಾಃ ದದರ್ಶ ವೇಶ್ಮಾದ್ರಿಷು ಚಂದ್ರಶಾಲಾಃ ॥**

**ಗೃಹಾಣಿ ನಾನಾವಸುರಾಜಿತಾನಿ ದೇವಾಸುರೈಶ್ಚಾಪಿ ಸುಪೂಜಿತಾನಿ ।**
**ಸರ್ವೈಶ್ಚ ದೋಷೈಃ ಪರಿವರ್ಜಿತಾನಿ ಕಪಿರ್ದದರ್ಶ ಸ್ವಬಲಾರ್ಜಿತಾನಿ ॥**

**ತತೋದದರ್ಶೋಚ್ಚ್ರಿತಮೇಘರೂಪಂ ಮನೋಹರಂ ಕಾಂಚನಚಾರುರೂಪಮ್।**
**ರಕ್ಷೋಧಿಪಸ್ಯಾತ್ಮಬಲಾನುರೂಪಂ ಗೃಹೋತ್ತಮಂ ಹ್ಯಪ್ರತಿರೂಪರೂಪಮ್॥**

**ಮಹೀತಲೇ ಸ್ವರ್ಗಮಿವ ಪ್ರಕೀರ್ಣಂ ಶ್ರಿಯಾ ಜ್ವಲಂತಂ ಬಹುರತ್ನಕೀರ್ಣಮ್।**
**ನಾನಾತರೂಣಾಂ ಕುಸುಮಾವಕೀರ್ಣಂ ಗಿರೇರಿವಾಗ್ರಂ ರಜಸಾವಕೀರ್ಣಮ್॥**

**ನಾರೀಪ್ರವೇಕೈರಿವ ದೀಪ್ಯಮಾನಂ ತಡಿದ್ಭಿರಂಭೋಧಸಮರ್ಚ್ಯಮಾನಮ್ ।**
**ಹಂಸಪ್ರವೇಕೈರಿವ ವಾಹ್ಯಮಾನಂ ಶ್ರಿಯಾಯುತಂ ಖೇ ಸುಕೃತಾಂ ವಿಮಾನಮ್॥**

**ಯಥಾ ನಗಾಗ್ರಂ ಬಹುಧಾತುಚಿತ್ರಂ ಯಥಾ ನಭಶ್ಚ ಗ್ರಹಚಂದ್ರಚಿತ್ರಮ್ ।**
**ದದರ್ಶ ಯುಕ್ತೀಕೃತಮೇಘಚಿತ್ರಂ ವಿಮಾನರತ್ನಂ ಬಹುರತ್ನಚಿತ್ರಮ್ ॥**

**ಮಹೀ ಕೃತಾ ಪರ್ವತರಾಜಿಪೂರ್ಣಾ ಶೈಲಾಃ ಕೃತಾ ವೃಕ್ಷವಿತಾನಪೂರ್ಣಾಃ ।**
**ವೃಕ್ಷಾಃ ಕೃತಾಃ ಪುಷ್ಪವಿತಾನಪೂರ್ಣಾಃ ಪುಷ್ಪಂ ಕೃತಂ ಕೇಸರಪತ್ರಪೂರ್ಣಮ್॥**

**ಪುಷ್ಪಾಹ್ವಯಂ ನಾಮ ವಿರಾಜಮಾನಂ ರತ್ನಪ್ರಭಾಭಿಶ್ಚ ವಿವರ್ಧಮಾನಮ್ ।**
**ವೇಶ್ಮೋತ್ತಮಾನಾಮಪಿ ಚೋಚ್ಚಮಾನಂ ಮಹಾಕಪಿಸ್ತತ್ರ ಮಹಾವಿಮಾನಮ್॥**

(ಸು.ಕಾ. ೭-೨, ೩, ೫-೯, ೧೧)

ಇಂತಹ ವಿಮಾನವನ್ನು ಕಪಿಶ್ರೇಷ್ಠ ನೋಡಿ ವರ್ಣಿಸುತ್ತಾನೆ. ನಾನಾವಿಧ ಸುಗಂಧ ಪುಷ್ಪಗಳಿಂದ ಶೋಭಿಸುವ ವಿಮಾನವನ್ನು ಪುಷ್ಪಕವಿಮಾನವೆಂದು ತಿಳಿಸಲಾಗಿದೆ.

**ಪುಷ್ಪಕ ವಿಮಾನ ವರ್ಣನೆ :** ಇಂತಹ ಮನೋಹರವಾದ ವಿಮಾನವನ್ನು ಕವಿ ಎಂಟು ಶ್ಲೋಕಗಳಿಂದ ವರ್ಣಿಸುತ್ತಾನೆ. (ಎಂಟನೇ ಸರ್ಗ)

ವಿಮಾನವು ವಿಶಾಲವಾಗಿಯೂ, ವಜ್ರ ವೈಢೂರ್ಯಗಳಿಂದ ಚಿತ್ರಿಸಲ್ಪಟ್ಟಿತ್ತು. ಅದರಲ್ಲಿ ಒಂದು ಕೃತ್ರಿಮ ದತ್ತೂರಿಯು ಚಿನ್ನದ ಒಡವೆಯಂತಿರುವುದನ್ನು ಹನುಮಂತ ನೋಡಿದನು. ಕೃತ್ರಿಮತೆ ಅವರ್ಣನೀಯ. ಪ್ರಾಯಶಃ ವಿಶ್ವಕರ್ಮನಿಂದಲೇ ನಿರ್ಮಿಸಲಾಗಿರುವುದು ಎಂದು ತಿಳಿಸುತ್ತಾನೆ. ಆ ವಿಮಾನವು ದಿವ್ಯಗತಿ ವಾಯುಮಾರ್ಗವಾಗಿ ಚಲಿಸುವಂತಿತ್ತು.



**ಸ ತಸ್ಯ ಮಧ್ಯೇ ಭವನಸ್ಯ ಸಂಸ್ಥಿತಂ ಮಹದ್ವಿಮಾನಂ ಮಣಿರತ್ನಚಿತ್ರಿತಮ್॥**
**........**

**ತದಪ್ರಮೇಯಾಪ್ರತಿಕಾರಕೃತ್ರಿಮಂ ಕೃತಂ ಸ್ವಯಂಸಾಧ್ವಿತಿ ವಿಶ್ವಕರ್ಮಣಾ ।**
**ದಿವಂ ಗತಂ ವಾಯುಪಥಪ್ರತಿಷ್ಠಿತಂ ವ್ಯರಾಜತಾದಿತ್ಯಪಥಸ್ಯ ಲಕ್ಷ್ಮವತ್ ॥**

(ಸು.ಕಾ. ೮-೧, ೨)

ಇಂತಹ ಲೋಕವಿಲಕ್ಷಣ ವಿಮಾನವನ್ನು ನಿರ್ಮಿಸಬೇಕಾದರೆ ವರ್ಷಗಟ್ಟಲೆ ತಪಸ್ಸು ಮಾಡಿ ಸಾಧಿಸಬೇಕು. ಜೊತೆಗೆ ಏಕಾಗ್ರತೆ ಹಟವಿರಬೇಕು. ಇಂತಹ ವಿಮಾನವನ್ನು ವಿಶ್ವಕರ್ಮನು ನಿರ್ಮಿಸಿದ. ಇದನ್ನು ನೋಡಿ ತನಗೇ ಆಶ್ಚರ್ಯವಾಗಿ ಭಲೇ, ಎಂದು ತನ್ನ ಸಾಮರ್ಥ್ಯವನ್ನು ಹೊಗಳಿಕೊಂಡನು.

---

**ವಿಶ್ವಕರ್ಮ :** ಇವನು ತ್ವಷ್ಟ್ರನೆಂದು ೧೨ ಜನ ಆದಿತ್ಯರಲ್ಲಿ ನಾಲ್ಕನೆಯವನು. ಪ್ರಭಾಸನೆಂಬ ಮನುವಿನ ಮಗ. ಇವನೇ ವಿಶ್ವಕರ್ಮ. ದೇವಶಿಲ್ಪಿ. ಇವನ ತಾಯಿ ಬೃಹಸ್ಪತ್ಯಾಚಾರ್ಯರ ತಂಗಿ, ಬ್ರಹ್ಮವಾದಿನಿ. ವಿಶ್ವಕರ್ಮ ಪ್ರಹ್ಲಾದನ ಮಗಳಾದ ವಿರೋಚನೆಯನ್ನು ಮದುವೆಯಾದ. ಪ್ರಹ್ಲಾದನಿಗೆ ವಿರೋಚನ ಎಂಬ ದೈತ್ಯನೂ ಮಗನಾಗಿದ್ದ. ವಿರೋಚನನ ಮಗನೇ ಬಲಿಚಕ್ರವರ್ತಿ. ವಿಶ್ವಕರ್ಮ ತನ್ನ ಗುರುಗಳ ಅಪೇಕ್ಷೆಯಂತೆ ಅವರ ಎಲ್ಲ ಅಪೇಕ್ಷೆಗಳನ್ನು ಪರಶಿವನ ವರಪ್ರಸಾದ ಬಲದಿಂದ ಸಂಪಾದಿಸಿದ್ದ. ಸಮಸ್ತವಾದ ಅಲೌಕಿಕ ವಿಶ್ವಚತುರತೆ ಹೊಂದಿ ಮನೆ, ಮಠ, ದೇವಾಲಯ, ವಿಶಾಲವಾದ ಸಭಾಂಗಣಗಳನ್ನು ಕ್ಷಣಮಾತ್ರದಲ್ಲಿ ನಿರ್ಮಿಸುವ ಕೌಶಲ್ಯ, ಇಂದ್ರಜಾಲ ಕೃತ್ರಿಮ ಕಲಾಕೌಶಲ್ಯಗಳನ್ನು ಹೊಂದಿ ಅದ್ಭುತ ಶಕ್ತಿವಂತನಾಗಿದ್ದ. ಜಲ ಭೂಮ್ಯಂತರಿಕ್ಷಗಳಲ್ಲಿ ಸಂಚರಿಸುವ ಸಕಲ ವಸ್ತುಗಳೂ ಇರುವ ವಿಮಾನವನ್ನು ನಿರ್ಮಿಸಿ ಲೋಕೋತ್ತರ ಖ್ಯಾತಿ ಪಡೆದ. ಶ್ರೀವೆಂಕಟೇಶ ಪದ್ಮಾವತಿ ಕಲ್ಯಾಣ ಸಮಯದಲ್ಲಿ ನಾರಾಯಣಪುರದಲ್ಲಿ ವಿಚಿತ್ರ ವೈಭವೋಪೇತ ವಿಶಾಲ ಕಲ್ಯಾಣ ಮಂಟಪ, ವಸತಿಗಳು ಇವನಿಂದಲೇ ನಿರ್ಮಾಣವಾಯಿತೆಂದು ತಿಳಿದುಬರುತ್ತದೆ. ಇವನೇ ವಿಮಾನಕರ್ತೃ. ಇಂತಹ ವಿಮಾನ ನಿರ್ಮಿಸಿದ ನಂತರ ಅವನಿಗೇ ಆಶ್ಚರ್ಯವಾಯಿತಂತೆ. (ಸ್ಕಾಂದಪುರಾಣ ಕಾಶೀಖಂಡ ೭೬). ಕರ್ನಾಟಕದಲ್ಲಿ ಇವನನ್ನು ಜಕ್ಕಣ್ಣನೆಂದು ಹೆಸರಾಗಿ ದಕ್ಷಿಣ ಭಾರತದಲ್ಲಿ ಅನೇಕ ಚಿತ್ರ ವಿಚಿತ್ರ ದೇವಾಲಯಗಳನ್ನು ನಿರ್ಮಿಸಿದನೆಂದು ಹೆಸರು ಪಡೆದ. ಇವರ ವಂಶಜರನ್ನು ಸ್ಥಪತಿ ಎನ್ನಲಾಗಿದೆ.

ಸುಮಾರು ೫೦ ವರ್ಷಗಳ ಹಿಂದೆ ಒಂದು ತೆಲುಗೂ ಸಿನಿಮಾ ಬಳ್ಳಾರಿಯಲ್ಲಿ ನೋಡಿದೆ. ಕೀಲುಗುರ್ರಂ ಎನ್ನುವುದರಲ್ಲಿ ಒಬ್ಬ ತೋಟ ಮಾಲಿ ವಿಶಾಲ ನಗರದ ರಾಜಕುಮಾರಿಯನ್ನು ಪ್ರೀತಿಸುತ್ತಾನೆ. ಒಮ್ಮೆ ಅವಳನ್ನು ನೋಡಬೇಕೆಂದು ಇಷ್ಟಪಟ್ಟಾಗ ಆ ಊರಿನ ಸ್ಥಪತಿಗಳು (ವಿಶ್ವಕರ್ಮರು) ಅವರಿಗಾಗಿ ಒಂದು ಕುದುರೆಯನ್ನು ತಯಾರು ಮಾಡುತ್ತಾರೆ. ಅದರ ಉದರದಲ್ಲಿ ಕೆಲ ಯಂತ್ರಗಳನ್ನು ಅಳವಡಿಸಿ ಚಾಲಕನು ಕ್ಷಣಾರ್ಧದಲ್ಲಿ ಹಾರಿಹೋಗಿ ತನ್ನ ಪ್ರೇಯಸಿಯನ್ನು ಕಾಣಲು ಅನುಕೂಲ ಮಾಡಿಕೊಡುತ್ತಾರೆ. ಚಿತ್ರದಲ್ಲಿ ೬/೭ ಚಕ್ರಗಳನ್ನು ಜೋಡಿಸಿರುವುದನ್ನು ತೋರಿಸಿದ್ದನ್ನು ನೋಡಿದ ನೆನಪಿದೆ.

ವೈದ್ಯಶಾಸ್ತ್ರದಲ್ಲಿ ಭಾರತ ಅತಿ ಹಿಂದೆ ಆಯುರ್ವೇದ ಶಾಸ್ತ್ರವನ್ನು ಪ್ರಯೋಗ ಮಾಡಿದರು. ಇತ್ತೀಚೆಗೆ ಆಯುರ್ವೇದದ ಬಗ್ಗೆ ಮಾನವರ ಗಮನ ಸೆಳೆಯುತ್ತಾರೆ.

**ಬೃಹಸ್ಪತಿಸವೇನೇಷ್ಟಂ ಯೇನಾಸಾ ಸ್ಥಪತಿರ್ಮತಃ ।**
**ಪ್ರಾಸಾದಾದಿಕರಃ ಶಿಲ್ಪೀ ಸ್ಥಪತಿಃ ಕಂಚುಕೀಮತಃ (ಶಾಸ್ವತ)**

An Architect ದೇವಶಿಲ್ಪಿ

ಇಂತಹ ವಿಮಾನವು ಸೂರ್ಯನ ಗತಿ (ಸಂಚಾರ) ಮಾರ್ಗ ಮಾಡುವಾಗ ಭೂಸಂಪರ್ಕವಿಲ್ಲದೆ ಆಕಾಶದಲ್ಲಿ ನಿಲ್ಲುತ್ತಿತ್ತು.

**ಅನೇಕ ಸಂಸ್ಥಾನ ವಿಶೇಷ ನಿರ್ಮಿತಂ ತತಸ್ತತಸ್ತುಲ್ಯವಿಶೇಷದರ್ಶನಂ ॥**

ಈ ವಿಮಾನದಲ್ಲಿ ಸಂಚರಿಸುವವರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಇಡುವಂತೆ ಜಲಪಾನೀಯಗಳಿಂದ ಸುಸಜ್ಜಿತವಾಗಿತ್ತು. ಯಾತ್ರಿಕರು ಬಯಸಿದ ಸ್ಥಳಕ್ಕೆ ಹೋಗುವಂತಿತ್ತು. ವೇಗವು ವಾಯುವನ್ನು ಮೀರಿಸಬಲ್ಲ ಶಕ್ತಿಯುತವಾಗಿತ್ತು.

**"ದುರಾವರಂ ಮಾರುತತುಲ್ಯಗಾಮಿನಮ್" ॥**

It must be like a boeing type of our times aeroplane. ಮಹಾತ್ಮರು, ಪುಣ್ಯವಂತರು, ಸಿದ್ಧಪುರುಷರು, ಯೋಗಿಗಳು ತಮ್ಮ ಯೋಗಬಲದಿಂದ ಲಭಿಸುವಂತ ದಿವ್ಯ ವಿಮಾನವನ್ನು, ನಿಶಾಚರ (ರಾವಣ) ಪಡೆದಿದ್ದ.

ಈ ರೀತಿಯ ಪುಷ್ಪಕ ವಿಮಾನವನ್ನು ಮಾರುತಾತ್ಮಜನು ನೋಡಿದನು.

**"ಸ ಪುಷ್ಪಕಂ ತತ್ರ ವಿಮಾನಮುತ್ತಮಮ್ ದದರ್ಶ ತದ್ವಾನರವೀರಸತ್ತಮಃ॥"**



ಇಲ್ಲಿ ವಿಮಾನದ ವೇಗದ ಬಗ್ಗೆ ವೇದದಲ್ಲಿ ಉಕ್ತವಾಗಿದೆ.

ವಿಶ್ವಕರ್ಮ ಈ ವಿಮಾನವನ್ನು ಹಿಂದೆ ಬ್ರಹ್ಮದೇವನಿಗಾಗಿ ನಿರ್ಮಿಸಿದನೆಂದು, ನಂತರ ಕುಬೇರ ಬ್ರಹ್ಮನನ್ನು ಮೆಚ್ಚಿಸಿ ಅದನ್ನು ತಾನು ಹೊಂದಿದ. ಆಮೇಲೆ ರಾವಣ ಲಂಕಾಪಟ್ಟಣವನ್ನು ಆಕ್ರಮಿಸಿ ಕುಬೇರನನ್ನು ಸೋಲಿಸಿ ಲಂಕಾ ಜೊತೆಗೆ ವಿಮಾನವನ್ನೂ ವಶಪಡಿಸಿಕೊಂಡನೆಂದಿದೆ.

**'ಬ್ರಹ್ಮಣಾರ್ಥೆ ಕೃತಂ ದಿವ್ಯಂ ದಿವಿಯದ್ವಿಶ್ವಕರ್ಮಣಾ**
**ವಿಮಾನಂ ಪುಷ್ಪಕಂ ನಾಮ ಸರ್ವರತ್ನವಿಭೂಷಿತಂ**
**ಪರೇಣ ತಪಸಾ ಲೆಭೇಯತ್ಕುಬೇರಂ ಪಿತಾಮಹಾತ್**
**ಕುಬೇರಯೋಜಸಾ ಜಿತ್ವಾಲೆಭೇತದ್ರಾಕ್ಷಸೇಶ್ವರಃ ॥**

ವಿಮಾನವು ಸೂರ್ಯ ಅಗ್ನಿಗಳಂತೆ ಪ್ರಕಾಶಮಾನವಾಗಿ ಅದನ್ನು ಹತ್ತಲು ಬಂಗಾರದಿಂದ ನಿರ್ಮಿತ ಮೆಟ್ಟಿಲುಗಳು ವೇದಿಕೆಯ ಮನೋಹರ ಸುಂದರವಾಗಿಯೂ ಕಿಟಕಿಗಳು ಸ್ಫಟಿಕದಿಂದ ಕೂಡಿತ್ತು. ಅನೇಕ ನೀಲ, ಹವಳ ಇತ್ಯಾದಿ ಮಣಿಗಳಿಂದ ಸುತ್ತಲ್ಪಟ್ಟಿತ್ತು. ಒಳಗಡೆ ಸುಗಂಧ ಸೂಸುವ ಚಂದನಾದಿಗಳಿಂದ ತುಂಬಿತ್ತು. ಇಂತಹ ಲೋಕ ವಿಲಕ್ಷಣ ವಿಮಾನವನ್ನು ಹನುಮಂತ ನೋಡಿದನೆಂದಿದೆ.

ಈ ರೀತಿಯಾಗಿ ಸುಂದರಕಾಂಡ ಸರ್ಗ ೮ ರಿಂದ ೯ನೇ ಅಧ್ಯಾಯದಲ್ಲಿ ೩೦ ಶ್ಲೋಕಗಳಿಂದ ವಾಲ್ಮೀಕಿ ಕವಿ ವರ್ಣಿಸುತ್ತಾನೆ. ಮುಂದೆ ಯುದ್ಧಕಾಂಡದ ೧೩೦ನೇ ಸರ್ಗದಲ್ಲಿ ಶ್ರೀರಾಮ ಸೀತಾಪಾತಿವ್ರತ್ಯ ನಿರೂಪಿಸಿದ ನಂತರ ಕೂಡಲೇ ಕಾಯುತ್ತಿರುವ ಭರತನನ್ನು ಕಾಣಬೇಕೆಂದು ಸೀತಾಲಕ್ಷ್ಮಣರ ಸಮೇತ ಇದೇ ಪುಷ್ಪಕ ವಿಮಾನದಲ್ಲಿ ಅಯೋಧ್ಯಾಗಮನ ಮಾಡಿದರು.

**ದದೃಶಂ ಸ್ತಂ ವಿಮಾನ ಸ್ಥಂ ನರಾಃ ಸೋಮವಿವಾಂಬರೇ**
**ಸಾ ಬ್ರಹ್ಮಣಾಸೃಷ್ಟೆ ವಿಮಾನೇ ಭರತಾಗ್ರಜಃ ॥**
**ರರಾಜ ಪೃಥುದೀರ್ಘೌ ಕ್ಷೋ ವಜ್ರಪಾಣಿರಿವಾಪುರಃ**
**ವಿಮಾನಾಗ್ರಗತಂ ಭರತಂ ಭ್ರಾತರಂ ತದಾ ।**
**ವವಂದೇ ಪ್ರಯತೋ ರಾಮಂ ಮೇರುಸ್ಥ ಇವ ಭಾಸ್ಕರಂ ॥**

ರಾವಣಾದಿಗಳ ಸಂಹಾರಾ ನಂತರ ಶ್ರೀರಾಮಚಂದ್ರ ಸೀತಾದೇವಿಯೊಂದಿಗೆ ಅನೇಕ ಭಕ್ತರಾದ ಹನುಮಂತ, ವಿಭೀಷಣ, ಜಾಂಬವಂತ, ಲಕ್ಷ್ಮಣನ ಸಂಗಡ

ತನ್ನನ್ನು ನಿರೀಕ್ಷಿಸುತ್ತಿರುವ ಭರತನನ್ನು ಕಾಣಲು ಅಯೋಧ್ಯಾ ನಗರಿಗೆ ಇದೇ ವಿಮಾನದಲ್ಲಿ ತೆರಳಿದನೆಂದಿದೆ.

ಈಗಿನ ಯುಗದ ವಿಮಾನ (Aeroplane) ದಂತೆ ಸುಸಜ್ಜಿತವಾಗಿತ್ತು ಎಂಬುದನ್ನು ಕಾಣುತ್ತೇವೆ. ಶ್ರೀಮದ್ಭಾಗವತದಲ್ಲಿಯೂ ವಿಮಾನ ಕುರಿತಂತೆ ಸ್ವಲ್ಪ ವಿವರವಿರುವುದು.

ಭಾಗವತ ತೃತೀಯ ಸ್ಕಂದ ೨೪ನೇ ಅಧ್ಯಾಯ ಶ್ಲೋಕ ೧ ರಿಂದ ೫೩ರವರೆಗೆ ವಿವಿಧವಾಗಿ ವರ್ಣಿತವಾಗಿದೆ.

**ದೇವಹೂತಿ ಪತಿಸೇವಾ :**

**ಪಿತೃಭ್ಯಾಂ ಪ್ರಸ್ಥಿತೇ ಸಾಧ್ವಿ ಪತಿಮಿಂಗಿತ ಕೋವಿದಾ ।**
**ನಿತ್ಯಂ ಪರ್ಯಚರತ್ ಪ್ರೀತ್ಯಾ ಭವಾನೀವ ಭವಂ ಪ್ರಭುಮಾ ॥**

ಕರ್ದಮ ದೇವಹೂತಿಯರ ವಿವಾಹವಾದ ಮೇಲೆ ತನ್ನ ತಂದೆ ತಾಯಿಯರನ್ನು ಬೀಳ್ಕೊಟ್ಟು ಪತಿಸೇವಾ ಮಗ್ನಳಾಗಿ ಕರ್ದಮರ ತಪಸ್ಸಿಗೆ ವಿಘ್ನ ಬಾರದಂತೆ ಭಕ್ತಿಯಿಂದ ಸೇವಿಸುತ್ತಾ ಬಂದಳು. ಪಾರ್ವತೀ ಪರಮೇಶ್ವರನ ಸೇವೆಯಂತೆ ನಿತ್ಯವೂ ಭಕ್ತಿಯಿಂದ ಸೇವಿಸುತ್ತಿದ್ದಳು. ದೇವಹೂತಿ ಪತಿಸೇವಾ ಪರಾಯಣಳಾಗಿ ತನ್ನ ದೇಹ ಕೃಶವಾಗಿರುವುದನ್ನು ಗಮನಿಸಲೇ ಇಲ್ಲ.

ಒಂದು ದಿನ ದೇವಹೂತಿಯ ಶರೀರವು ತನ್ನ ಸೇವೆಯಲ್ಲೇ ನಿರತಳಾಗಿ ಕೃಶವಾಗಿರುವುದನ್ನು ನೋಡಿ ಕರ್ದಮರು ಸಂತೋಷಪಟ್ಟರು.

**ತುಷ್ಟೋಹಮದ್ಯ ತವಮಾನಿನಿ ಮಾನದಾಯಾಃ ಶುಷ್ರೋಯಾ**
**ಪರಮಹಯ ಪರಯಾಚ ಭಕ್ತ್ಯಾ ॥**

ಕರ್ದಮರು ದೇವಹೂತಿಯ ಸೇವೆಯಿಂದ ಪ್ರೀತರಾಗಿ ಪ್ರೇಮದಿಂದ "ಹೇ ಸತೀಮಣಿ, ನೀನು ನನ್ನ ಸುಖಕ್ಕಾಗಿ ದೇಹದ ಪರಿವಿಯೇ ಇಲ್ಲದೆ ಕೈಂಕರ್ಯವನ್ನು ಮಾಡಿದೆ. ಇಂತಹ ಸೇವೆಯಿಂದಾಗಿ ನನಗೆ ದಿವ್ಯ ಯೋಗ ಶಕ್ತಿ ಬರುವಂತೆ ಮಾಡಿದೆ. ನಿನಗೆ ಒಂದು ಅಲೌಕಿಕ ದೃಷ್ಟಿ ಕೊಡುತ್ತೇನೆ. ಅದರಿಂದ ವಿಚಿತ್ರ ಸಿದ್ಧಿಯನ್ನು ಹೊಂದುವೆ."

ದೇವಹೂತಿ ಹೇಳಿದಳು. "ಸ್ವಾಮೀ, ಪತಿದೇವ, ನನ್ನ ಸೇವೆಯಿಂದ



ಪ್ರೀತರಾಗಿದ್ದಲ್ಲಿ ಸತಿಯಾದವಳು ಪತಿಯೊಂದಿಗೆ ಸಂಸಾರ ಸುಖವನ್ನು ಇಚ್ಛಿಸುತ್ತಾಳೆ. ಸಂತಾನವನ್ನು ಅಪೇಕ್ಷಿಸುತ್ತಾಳೆ" ಎಂದಾಗ ದೇವಹೂತಿ ನಿನ್ನ ಸೇವೆ ವ್ಯರ್ಥವಾಗುವುದಿಲ್ಲ. ನಿನಗೆ ಒಂದು ನೂರು ವರ್ಷ ಲೋಕ ವಿಲಕ್ಷಣ ಸುಖ ಸಂಪತ್ತು ಬರುವಂತೆ ಮಾಡುತ್ತೇನೆ. ಆಮೇಲೆ ಜಗತ್ಪತಿಯಾದ ಶ್ರೀಹರಿಯೇ ನಿನ್ನ ಪುತ್ರನಾಗಿ ಜನಿಸುತ್ತಾನೆ ಎಂದು ಅವಳ ಕಾಮನೆಯನ್ನು ಪೂರ್ಣಮಾಡಬೇಕೆಂದು ತಮ್ಮ ತಪೋಯೋಗದಿಂದ ತಕ್ಷಣ ಒಂದು ಕಾಮಗಾ ವಿಮಾನವನ್ನು ಸೃಷ್ಟಿಸಿದರು. (ಕಾಮಗಾ = ಇಷ್ಟ ಬಂದೆಡೆಗೆ ಸ್ವೇಚ್ಛೆಯಿಂದ ಚಲಿಸುವ)

---

**ದೇವಹೂತಿಯ ಬಗ್ಗೆ ವಿವರಣೆ :** ಸ್ವಾಯಂಭೂ ಮನುವಿನ ಪುತ್ರಿ. ಈಕೆಯ ಜೇಷ್ಠಳು ಆಕೂತಿ. ತಂದೆ ಪ್ರಸೂತಿ ಎಂದು. ದೇವಹೂತಿ ಕರ್ದಮ ಮಹರ್ಷಿಯ ಪತ್ನಿ. ಇವಳಲ್ಲಿ ಸಾಕ್ಷಾತ್ ನಾರಾಯಣನೇ ಕಪಿಲನೆಂಬ ಹೆಸರಿನಿಂದ ಜನಿಸಿ ಸಾಂಖ್ಯಶಾಸ್ತ್ರವನ್ನು ಬೋಧಿಸಿದ. ಈಕೆಗೆ ಅನುಸೂಯಾದಿಯಾಗಿ ಒಂಭತ್ತು ಮಂದಿ ಪುತ್ರಿಯರಾಗಿ ಜನಿಸಿದರು.

---

**ವಿಮಾನ ವರ್ಣನೆ :**

**ಸರ್ವಕಾಯದಗಂ ದಿವ್ಯಂ ಸರ್ವರತ್ನ ಸಮನ್ವಿತಂ ಸರ್ವದ್ಧರ್ಯುಪಚಮೋದಕಂ। ಮಣಿಸ್ತಂ = ಭ್ಯೆರುಪಸ್ಕೃತಮ್ ।**

**......ತಸ್ಮಿನ್ ವಿಮಾನ ಉತ್ಕೃಷ್ಟ ಶಯ್ಯಾಂ ರತಿಕ ರೀಶ್ರೀತಾ ॥**
**ನಚಾ ಬುದ್ಧ್ಯತಂ ಕಾಲಂ ಪತ್ಯಾವಿ ಇಚ್ಯೆನ ಮುಹೂರ್ತವತ್ ।**
**ಏವಂ ಯೋಗಾನುಭಾವೇನ ದಂಪತ್ಯೋರಮಯಾಣಯೋತಿ ।**
**ಶತಂ ವ್ಯತೀಯುಃ ಶರದಃ ಕಾಮಲಾಲ ಸಯೋರ್ಮುದಾ ॥ (೪ ೬)**

ಇಂತಹ ವಿಮಾನವು ಭೂಲೋಕದಲ್ಲೇ ಏಕೆ ? ಸ್ವರ್ಗದಲ್ಲಿಯೂ ಕಾಣಲಾಗದು. ಹೀಗೆ ದೇವಹೂತಿ ಪತಿ ಕರ್ದಮರೊಂದಿಗೆ ವಿಹಾರ ಮಾಡಿದಾಗ ನೂರು ವರ್ಷ ಗೊತ್ತಿಲ್ಲದೆ ಕಳೆದುಹೋಯಿತು ಎಂದು ಸುದೀರ್ಘವಾಗಿ ವಿಮಾನ ವರ್ಣನೆ ಇರುವುದು.

ಇದೇ ಭಾಗವತ ಷಷ್ಠ ಸ್ಕಂದ ನಾರಾಯಣವರ್ಮ ವಿವರಿಸುತ್ತಾ ಇಂದ್ರನಿಗೆ ವಿಶ್ವರೂಪಾಚಾರ್ಯರು ಉಪದೇಶ ಮಾಡಿ ನಾರಾಯಣವರ್ಮ ಮಹಾಮಂತ್ರ

ಪ್ರಭಾವವನ್ನು ವಿವರಿಸುತ್ತಾ ಚಿತ್ರಕೇತು ಎಂಬ ಗಂಧರ್ವನು ಒಂದು ವಿಮಾನದಲ್ಲಿ ಸಂಚರಿಸುತ್ತಲಿದ್ದಾಗ ಕೆಳಗೆ ಕೌಶಿಕನೆಂಬ ಯೋಗಿ ಮರಣಿಸಿ ಅವನ ಅಸ್ತಿಗಳು ಮೇಲೆ ಹಾರಿದಾಗ ವಿಮಾನ ಕೆಳಗೆ ಬಿದ್ದಿತು ಎಂದಿದೆ.

**ಇಯಾಂ ವಿದ್ಯಾಂ ಪುರಾ ಕಶ್ಚಿತ್ ಕೌಶಿಕೋಧಾರಯನ್ ದ್ವಿಜಃ ।**
**ಯೋಗಧಾರಯಣಯಾ ಸ್ವಾಂಗಂ ಜತಾ ಸಮರುಧನ್ವನಿ ॥**
**ತಸ್ಯೋಪರಿ ವಿಮಾನೇನ್ ಗಂಧರ್ವ ಪತಿರೇಕದಾ ।**
**ಯಯೌ ಚಿತ್ರರಥಃ ಸ್ತ್ರೀಭಿವೃತೋಯತ್ರದ್ವಿಜಕ್ಷಯಃ ॥**
**ಸಾಂಗಂ ನ್ಯಪತತ್ ಸದ್ಯಃ ಸವಿಮಾನೋ ಹ್ಯವಾಶ್ಶಿರಾಃ ।**
(ಭಾಗವತ ೬-೭-ಆನೇ ಅಧ್ಯಾಯ ೨೭-೨೯)

ಮಹಾಭಾರತ ವನಪರ್ವ ೧೬೮ರಲ್ಲಿ ವಿಮಾನ ಕುರಿತಾಗಿ **"ವಿಮಾನಂ ಪುಷ್ಪಕಂ ನಾಮು ಕಾಯುಗಂ ಚದದೌಪ್ರಭುಃ ।"** ಎಂದಿದೆ.

ಪದ್ಮಪುರಾಣಾಂತರ್ಗತ ಗೋಕರ್ಣ ಮಹಾತ್ಮ್ಯೆ ೫ನೇ ಅಧ್ಯಾಯದಲ್ಲಿ ದುಂದುಕಾರ ಭಾಗವತಕಥಾಶ್ರವಣ ಫಲವಾಗಿ ಅವನನ್ನು ವಿಷ್ಣುದೂತರು ಬಂದು ವಿಮಾನದಲ್ಲಿ ಕರೆದುಕೊಂಡು ಹೋದರೆಂದು ತಿಳಿಸುತ್ತದೆಯೇ ಆಗಲಿ ವಿಮಾನ ವರ್ಣನೆ ಇರುವುದಿಲ್ಲ.

ಹೀಗೆ ವಿಮಾನಶಾಸ್ತ್ರಗಳ ಬಗ್ಗೆ Technical aspects ವಿವರಿಸಿದ್ದನ್ನು ಯುಗಗಳ ಹಿಂದೆ ವೇದ, ರಾಮಾಯಣ, ಮಹಾಭಾರತ, ಭಾಗವತಾದಿ ಪ್ರಾಚೀನ ಗ್ರಂಥಗಳಲ್ಲಿ ವಿವರ ಕಾಣುತ್ತೇವೆ ಎಂದು ಹಿಗ್ಗಬಹುದಾದರೂ ವಿಷಾದ ಎಂದರೆ ಈಗ ಅವುಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುವ ಗ್ರಂಥಗಳು ಲಭ್ಯವಿಲ್ಲ. ಎಲ್ಲಿ ಹೋಯಿತು ? ವೆಂಬುದೇ ವಿಸ್ಮಯ.

ಭಾರತಕ್ಕೆ ಇಂತಹ ದುಃಸ್ಥಿತಿ ಏಕೆ ಬಂದಿತು ? ಕಾರಣವೇನು ? ನಮ್ಮ ವೈಜ್ಞಾನಿಕ ಕೃತಿಗಳ ಸಂಪತ್ತು ನಮ್ಮ ದೇಶದಲ್ಲೇ ಇಲ್ಲದೆ ಪಾಶ್ಚಿಮಾತ್ಯ ದೇಶ ತತ್ರಾಪಿ ಜರ್ಮನಿಯಲ್ಲಿ ಹೇಗೆ, ಯಾವಾಗ ಸೇರಿತು ? ಎನ್ನುವುದಕ್ಕೆ ಕಾರಣ ಹುಡುಕಬೇಕು. ನಿಗೂಢವಾಗಿದೆ, ಶೋಧನೆ ಅಗತ್ಯ.

ಪ್ರಾಯಶಃ ಇದಕ್ಕೆ ಮೂರು ನಾಲ್ಕು ಕಾರಣಗಳಿಂದಾಗಿ ನಮ್ಮ ಸಂಸ್ಕೃತಿ, ವಿಜ್ಞಾನ ಭಾರತದಿಂದ ಪಲಾಯನವಾಗಲೂ ಸಾಧ್ಯತೆ ಇರಬೇಕು.



ನಮ್ಮ ಅಧ್ಯಾತ್ಮಿಕ ಸಂಪತ್ತು ಲೋಕೋತ್ತರವಾಗಿದ್ದಿತು. ಈಗಲೂ ಇದೆ. ಈ ಆತ್ಮ ವಿದ್ಯೆಯಲ್ಲಿ ಹೆಚ್ಚು ಸಮಯ, ವಿಮರ್ಶೆ ಶೋಧನೆಯಲ್ಲೇ ಋಷಿಮುನಿಗಳು ವಿಶಿಷ್ಟ ರೀತಿಯಲ್ಲಿ ಮಗ್ನರಾಗಿ ವೈಜ್ಞಾನಿಕ ವಿಷಯದ ಬಗ್ಗೆ ಅಷ್ಟಾಗಿ ಆಸಕ್ತಿ ತೋರಿಸಲಿಲ್ಲ. ಈ ಲೋಕದ ವಿಷಯದ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಪರಲೋಕದ ವಿಷಯ ಚರ್ಚೆ ಗ್ರಂಥರಚನೆಗಳಿಗೆ ಆದ್ಯತೆ ಕೊಟ್ಟು ಬಾಕಿ ಎಲ್ಲಾ ಇಹಲೋಕಕೆ ಸಂಬಂಧಿಸಿದ್ದೆಂದು, ಹೆಚ್ಚಾಗಿ ಪ್ರಯಾಸ ಮಾಡಲಿಲ್ಲವಾದ್ದರಿಂದ ಕಾಲಕ್ರಮೇಣ ಮರೆತುಹೋಗಿರಬೇಕು. We, Indians gave scant importance to the Mundane aspects when compared to their achievements in the philosophical field. This aspect is very discouraging.

ಎರಡನೆಯದಾಗಿ ಜ್ಞಾನಿಗಳು, ಮುನಿಗಳು ಈ ವಿಜ್ಞಾನ ವಿದ್ಯೆಯನ್ನು ಮುಂದಿನ ಪೀಳಿಗೆಗೆ ಬೋಧಿಸದೆ ಗುಪ್ತವಾಗಿಟ್ಟು ಹೆಚ್ಚು ಅಧ್ಯಯನಕ್ಕೆ ಅವಕಾಶ ಕೊಡದಿರಲೂ ಒಂದು ಕಾರಣವಿರಬಹುದು. Our ancient seers were very conservatives and conceited. ಪ್ರತಿಷ್ಠೆ, ಅಹಂಕಾರಯುಕ್ತರಾಗಿ ಉಪದೇಶ ಮಾಡಲಿಲ್ಲ.

ಮೂರನೆಯದಾಗಿ ಪ್ರಾಯಶಃ ಚರಿತ್ರೆಯ ಪ್ರಕಾರ ನಮ್ಮ ಜಾಣತನವನ್ನು ಪರರಾಷ್ಟ್ರಗಳಿಗೆ ಮಾರಿರಬಹುದು. Alexander of Mascedonia ಪ್ರಥಮ ಬಾರಿ ಭಾರತದ ಆಕ್ರಮಣ ಮಾಡಿದ. ಸಾಕಷ್ಟು ಉತ್ತರ ಭಾರತ, ಪಶ್ಚಿಮ ದೇಶಗಳನ್ನು ವಶಪಡಿಸಿಕೊಂಡು ಕಾಬೂಲ್, ಕಂದಹಾರ, ಕಾಶ್ಮೀರ, ಪಂಜಾಬ್ ದೇಶಗಳು ಅವನ ಅಧೀನವಾಯಿತು.

ಕಂದಹಾರ(ಗಾಂಧಾರ)ದಲ್ಲಿ ಅನೇಕ ಕುಶಲರು ವಿಜ್ಞಾನ ಸಂಘಗಳಿದ್ದವು. ಅಲೆಗ್ಸಾಂಡರ್ ಭಾರತದಿಂದ ಮರಳಿ ಹೋಗುವಾಗ ಸಾಕಷ್ಟು ಜ್ಞಾನ ಭಂಡಾರವನ್ನು ತೆಗೆದುಕೊಂಡು ಹೋದನೆಂದು ಐತಿಹಾಸಿಕ ಪುಟಗಳಿಂದ ತಿಳಿದುಬರುವುದು. ಕಾಲಕ್ರಮೇಣ ಇಸ್ಲಾಂ ಧರ್ಮ ಪ್ರಭಾವದಿಂದ ಭಾರತದಲ್ಲಿನ ಅಮೂಲ್ಯ ಗ್ರಂಥಾಲಯಗಳನ್ನು ಬೂದಿ ಮಾಡಿದರು. ಮಹಮ್ಮದ್ ಘೋರ್ ಎಂಬಾತ ಅನೇಕ ಗ್ರಂಥಗಳನ್ನು ನಾಶಪಡಿಸಿದನೆಂದಿದೆ. ಅವರಲ್ಲಿ ಕೆಲವರು ಭಾರತೀಯ ಗ್ರಂಥಗಳನ್ನು ಕೊಂಡೊಯ್ದರು. (ಅಲ್ಬುರೇನಿಯ ಹೇಳಿಕೆ)

ಮುಂದೆ ಆಂಗ್ಲರ ಆಧಿಪತ್ಯ ಬಂದಾಗ ನಮ್ಮ ಸಂಸ್ಕೃತಿಯನ್ನು ಅಳಿಸಲು ಜ್ಞಾನ ಭಂಡಾರವನ್ನು ದೋಚಿದರೆಂದು ಅವರ ಕೃತಿಗಳಿಂದ ಸ್ಪಷ್ಟವಾಗಿ

ತಿಳಿದುಬರುವುದು. ಇದಕ್ಕೆ ಕಾರಣ ನಮ್ಮ ದೇಶದ ರಾಜಮಹಾರಾಜರು ತೋರಿದ ಅನಾದರ, ಅಸಡ್ಡೆ ಪರಸ್ಪರ ವೈರತ್ವ ಸ್ಪರ್ಧೆಗಳಿಂದ ಸ್ವತಂತ್ರ ಭಾರತ ಗುಲಾಮವಾಯಿತು. ತತ್ಪರಿಣಾಮವಾಗಿ ಜ್ಞಾನ ಸಂಪತ್ತು ಕಳೆದುಕೊಳ್ಳುವಂಥ ದುಃಸ್ಥಿತಿಗೆ ಮುಖ್ಯ ಕಾರಣವಾಗಿರಬೇಕು.

ಕೋಹಿನೂರ್ ವಜ್ರ ಇಂದಿಗೂ ಇಂಗ್ಲೆಂಡಿನಲ್ಲಿದೆ. Will Durrant ಎಂಬ ಐತಿಹಾಸಿಕ ತಜ್ಞ "India once a land of so many achievements in several fields has lost its glory and it is sad to note such a dismal state today must be because of Indian disregard and mutual acremony and bartered their glorious past. Indians are only responsible for their downfall" ಎಂದು ಸತ್ಯವಾಗಿಯೇ ಹೇಳಿರುತ್ತಾನೆ.

Incubator ಪರಿಜ್ಞಾನದ ವಿಷಯ ಮಹಾಭಾರತದಲ್ಲಿ ವಿವರಿಸಲಾಗಿದೆ. ಅಕಾಲಿಕ ಜನನದ ಮಗು ರಕ್ಷಣೆಯ ವಿಧಾನ. (Rearing of a child unnaturally born). ಗಾಂಧಾರಿ ಗರ್ಭಿಣಿಯಾಗಿದ್ದಳು. ಆದರೆ ತನ್ನ ವಾರಗಿತ್ತಿ ಕುಂತಿ ಧರ್ಮರಾಜನನ್ನು ಪಡೆದಳೆಂಬ ವಿಷಯ ತಿಳಿದು ಅಸೂಯೆಯಿಂದ ತನ್ನ ಗರ್ಭವನ್ನು ತಾಡನ ಮಾಡಿದಳು. ಪರಿಣಾಮವಾಗಿ ನೂರು ಅಪಕ್ವ (Premature) ಶಿಶು ಪಿಂಡಗಳು ಬಂದಾಗ ವೇದವ್ಯಾಸರು ಆ ಪಿಂಡಗಳನ್ನು ನೂರು ತುಪ್ಪದ ಮಡಿಕೆಯಲ್ಲಿಟ್ಟು ಪಕ್ವವಾಗುವವರೆಗೂ ರಕ್ಷಿಸಿದರೆಂದಿದೆ.

ನಮ್ಮಲ್ಲಿರುವ Leissez Fair - Peciferrous tendency (ಏನಾದರೂ ಆಗಲಿ ನಮಗೇನಾಗಬೇಕಾಗಿದೆ ? ಎಂಬ ಮನೋಭಾವವೇ ಅವನತಿಗೆ ಕಾರಣವಾಗಿ ಪರಿಣಮಿಸಿತು.

ಭಾರತ ಸ್ವತಂತ್ರ ರಾಷ್ಟ್ರವಾಗಿ ೬ ದಶಕಗಳೇ ಕಳೆದಿವೆ. ಆದರೆ ದುರ್ದೆಶೆ ಎಂದರೆ ಇಂದಿಗೂ ಅಭಿವೃದ್ಧಿ ಹೊಂದದ (undeveloped) ಸ್ಥಿತಿಯಲ್ಲಿದ್ದೇವೆ. ಪ್ರಗತಿ ಕಾಣದೆ ದಾರಿದ್ರ್ಯ, ಒಳಜಗಳ, ಮತೀಯ ವೈಶಮ್ಯ, ನುಡಿನಡೆಗಳಲ್ಲಿ ಸಾಮರಸ್ಯ, ಅಭಾವ, ಪರಸ್ಪರ ಭಾಷಾದ್ವೇಷ ಮುಂತಾದ ಅವನತಿಗೆ ನಾವೇ ಕಾರಣರಾಗಿರುತ್ತೇವೆ.

ಹೀಗಿರುವಾಗ ನಮ್ಮ ದೇಶದ ಪ್ರಾಚೀನ ಜ್ಞಾನ ಸಂಪತ್ತು, ವಿಜ್ಞಾನ ವಿಷಯ ಸಂಬಂಧಿತ ಗ್ರಂಥಗಳು ದ್ವೇಷದಿಂದ ಹಾರಿ ಹೋಗಿ ಪರದೇಶಗಳಲ್ಲಿ ರಕ್ಷಿತವಾಗಿರುವುದು ವಿಷಾದನೀಯ.



ಇಂಗ್ಲೆಂಡಿನಲ್ಲಿ ಭಾರತೀಯ ಗ್ರಂಥಾಲಯದಲ್ಲಿ ಭಾರತೀಯ ಅನೇಕ ಗ್ರಂಥಗಳು ಇಂದಿಗೂ ಇರುವುದು. ನಮ್ಮದಾದ ಜ್ಞಾನ ಭಂಡಾರ ಆ ದೇಶಗಳಲ್ಲಿ ಹೇಗೆ, ಏಕೆ ಹೋದವು ? ಎಂಬುದು ಸೋಜಿಗದ ಸಂಗತಿ. ವಿಮಾನಶಾಸ್ತ್ರದ ಬಗ್ಗೆಯೇ ಅಲ್ಲದೆ ವೈದ್ಯಕೀಯ, ಆಯುರ್ವೇದಶಾಸ್ತ್ರ, ಮೃತ್ಯು ಹೊಂದಿದವನ ಪುನರ್ಜೀವಿಸಲು ಸಂಬಂಧಪಟ್ಟ ಔಷಧಿಗಳ ಬಗ್ಗೆ ತಿಳಿದಿದ್ದೇವೆ. ಹನುಮಂತ ಸಂಜೀವಿನಿ ಬೆಟ್ಟದಿಂದ ಅಮೂಲ್ಯ ಔಷಧಿ ತಂದು ಲಕ್ಷ್ಮಣನನ್ನು ಬದುಕುವಂತೆ ಮಾಡಿದನೆಂದಿದೆ. ಮೃತ ಸಂಜೀವಿನಿ ವಿದ್ಯೆ ಎಲ್ಲಿ ಹೋಯಿತು ? ಯೋಗಿಗಳು ನೂರಾರು ವರ್ಷ ಜೀವಿಸುತ್ತಿದ್ದರು. ಯಾವ ಯೋಗಬಲವೆಂಬುದು ಪೂರ್ಣವಾಗಿ ತಿಳಿದಿಲ್ಲ.

**ವಿಜ್ಞಾನವು ತಿಳಿಸದೇ ಇರುವ ಕಗ್ಗಂಟುಗಳು :** ತತ್ವಜ್ಞಾನವಿಲ್ಲದೆ ವಿಜ್ಞಾನ ಕಾರ್ಯಕ್ಷೇತ್ರ ಪೂರ್ಣವಾಗುವುದಿಲ್ಲ. ಇಂದಿನ Radarನ ಪರಿಕಲ್ಪನೆ ರಾಮಾಯಣದಲ್ಲಿ ಗಗನದಲ್ಲಿ ಹಾರುವ ಪ್ರಾಣಿಗಳನ್ನು ಕೆಳಕ್ಕೆ ಎಳೆದು ನಾಶಮಾಡುವ ಸಿಂಹಿಕೆಯಿಂದ ತಿಳಿದುಬರುವುದು.

ಮಹಾಭಾರತದ ಯುದ್ಧಪ್ರಸಂಗದಲ್ಲಿ ಬಳಸಲಾದ ಅಸ್ತ್ರ ಶಸ್ತ್ರಗಳ ಪರಿಕಲ್ಪನೆ ಈ ಯುಗದ Nuclear weapons, guided missiles ಗಳಿಗಿಂತಲೂ ಭೀಷ್ಮರು ಶರಶೆಯ್ಯಯಲ್ಲಿದ್ದಾಗ ಬಾಯಾರಿಕೆ ನೀಗಲು ಅರ್ಜುನ ತನ್ನ ಬಾಣದಿಂದ ಭೂಗರ್ಭದಿಂದ ಜಲಧಾರೆ ಬಂದಿರುವುದು ಈಗಿನ ಕೊಳವೇಬಾವಿಯಂತೆ ಎಂದು ತಿಳಿಯಬಹುದು.

ಬ್ರಹ್ಮಾಸ್ತ್ರದ ಪ್ರಸಂಗದಲ್ಲಿ ಭಾಗವತ, ಮಹಾಭಾರತಾದಿಗಳಲ್ಲಿ ಪ್ರಯೋಗ ಉಪಶಮನ ವಿಷಯವಾಗಿ ವಿವರಿಸಿದರೆ ಈ ಯುಗದ ಶತಮಾನದ Nuclear war (Nuclear weapons) ದಿಂದ ತಿಳಿಯಲಾಗಿದೆ.

ಅಶ್ವಿನಿ ದೇವತೆಗಳು (Heavenly physicians) ಸಾಧಿಸಿದ ಕಲ್ಪನಾತೀತ ಚಮತ್ಕಾರಗಳು (Cesarian, Bypass Surgery).

ಇನ್ನು ವಿಮಾನವು ಹವಾನಿಯಂತ್ರಿತ (Boeing aeroplane airconditioned) ವಾಗಿದ್ದವೆಂದು ಈ ಮೊದಲೇ ತಿಳಿಸಲಾಗಿದೆ.

ಲೋಕಪ್ರಸಿದ್ಧ ಭಾರತೀಯ ದೇವಾಲಯಗಳು, ದೇವತಾ ಮೂರ್ತಿಗಳು, ಅಣೆಕಟ್ಟು, ಪರಿಜ್ಞಾನ, ವಿಶಾಲವಾದ ಸಭಾ ನಿರ್ಮಾಣ, ಮಯಸಭಾ ಆದಿಯಾಗಿ ವಿಶ್ವಕರ್ಮನ ಪರಿವಾರದವರ ಶ್ರಮದ ಫಲವಾಗಿ ನಿರ್ಮಿತವಾಗಿ ಅವರ ವಂಶಜರನ್ನು

ಬ್ರಾಹ್ಮಣರೆಂದು ಕರೆಯುಲಾಗಿ ಆಚಾರ್ ಎಂದಿರುವುದು. ಇಂತಹ ರಚನಾ ಚಾತುರ್ಯ ಭಾರತದಿಂದ ಮರೆಯಾಗಿದೆ ಎಂಬುದನ್ನು ತಿಳಿಸಲು ಖೇದವಾದ ಸಂಗತಿ. ಇನ್ನಾದರೂ ನಮ್ಮ ನಾಯಕರು ಎಚ್ಚೆತ್ತು ಭಾರತ, ಭಾರತೀಯತೆಯನ್ನು ಕಾಪಾಡಿಕೊಂಡು ಬರಬೇಕೆಂಬುದೇ ಈ ಲೇಖನದ ಉದ್ದೇಶ.

ಶೋಧನೆ / ಸಂಗ್ರಹ / ನಿರೂಪಣೆ

**ಪ್ರೊ॥ ಪಂ॥ ಬದರೀನಾಥಾಚಾರ್ಯ ಘೂಳೀ** ಎಂ.ಎ.

## ನನ್ನ ಇತರೆ ಲೇಖನೆಗಳು

೧. ಭಾರತೀಯ ವಾಸ್ತುಶಿಲ್ಪಶಾಸ್ತ್ರ – Indian Architecture - its place.

೨. ಹಿಂದೂ Mathematics.

೩. ವಿಜಯನಗರ – ಹಂಪಿನಗರ ಯಾರಿಂದ ಧ್ವಂಸವಾಯಿತು.

೪. ಹಂಪಿಯಲ್ಲಿ ಪ್ರಮುಖ ಐತಿಹಾಸಿಕ ಮಾಹಿತಿ ಮತ್ತು ಅಪ್ರಖ್ಯಾತ ಶಾಸನಗಳು.

೫. ಹಂಪಿಯಲ್ಲಿನ ದೇವಾಲಯ ಮಂದಿರಗಳ ವಿಮರ್ಶೆ.

೬. ಬಳ್ಳಾರಿ ನಡೆದು ಬಂದ ಇತಿಹಾಸ – Bellary through the Ages - Some unknown facts.

೭. ಕ್ರಿಸ್ತ, ಇಸ್ಲಾಂ, ಪಾರ್ಸಿ, ಸಿಖ್ಖರ ಸಿದ್ಧಾಂತಗಳ ವಿಮರ್ಶಾತ್ಮಕ ವಿವರಣೆ – A critical study in A.D.

೮. ಕರ್ನಾಟಕದಲ್ಲಿ ಅಶೋಕನ ಶಾಸನಗಳು – Edicts of Ashoka in Karnataka. (ಕೊಪ್ಪಳ, ರಾಂಪುರ, ಅಶೋಕ ಸಿದ್ಧಾಪುರ (ಬ್ರಹ್ಮಗಿರಿ))

೯. ರಾಧಾ ಯಾರು ? ಭಾಗವತದಲ್ಲಿಲ್ಲವೇಕೆ ?

೧೦. ಲಕ್ಷ್ಮಣ, ಭರತ – ಅಣ್ಣ ಯಾರು ?

೧೧. ಅಹಲ್ಯಾ ನಿಜವಾಗಿ ಪತಿತಳೇ ?

೧೨. ಮಂಡೋದರಿ ಪತಿವ್ರತಳೆಂಬುದು ಹೇಗೆ ?

ಇತ್ಯಾದಿಯಾಗಿ ಬರೆದಿರುವೆನು.